



ಜಕ್ಕಣಕ್ಕ...ಜಕ್ಕಣಕ್ಕ... ತಮಟೆ ಸದ್ದಿಗೆ ಆರತಿ ಹೊತ್ತ ಗಂಡುಮಕ್ಕಳ ಡ್ಯಾನ್ಸ್



ಚೆಂಡು ಹೂ ಚೆಂಡಾಡ್ಯಾವೆ...

ಆರತಿಯ ಶೃಂಗಾರಕ್ಕೆಂದೇ ಇಲ್ಲಿಯ ಹಳ್ಳಿಗರು ಚೆಂಡು ಹೂವು ಬೆಳೆಸುತ್ತಾರೆ. ಅಕ್ಕಿ ತಂಬಿಟ್ಟಿಗೆ ಕಡ್ಡಿ ಚುಚ್ಚಿ ಬಣ್ಣಬಣ್ಣದ ಚೆಂಡು ಹೂವಿನಿಂದ ಆರತಿಯನ್ನು ಶೃಂಗರಿಸುತ್ತಾರೆ.

ಮೊದಲು ಭಕ್ತರಹಳ್ಳಿ ನರಸಿಂಹಸ್ವಾಮಿಗೆ ಆರತಿ ಮಾಡಿ, ನಂತರ ಒಂದು ಕಿ.ಮೀ. ದೂರದ ಜಿಲ್ಲರಗುಂಟೆಯ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಬರುತ್ತಾರೆ. ಅಲ್ಲಿ ಮೂರು ಸುತ್ತು ಬಂದು, ಕಾಯಿ ಒಡೆದು ಚೆಂಡು ಹೂವುಗಳನ್ನು ಆರತಿಯಿಂದ ಬೇರ್ಪಡಿಸಿ, ದೇವಸ್ಥಾನದ ಮುಂದಿನ ರಾಶಿಗೆ ಹಾಕುತ್ತಾರೆ. ಬಣ್ಣ ಬಣ್ಣದ ಚೆಂಡು ಹೂವಿನ ರಾಶಿ ನೋಡುವುದೇ ಸೊಗಸು. ಈ ರಾಶಿಯಿಂದ ಒಳ್ಳೆಯ ಚೆಂಡು ಹೂವುಗಳನ್ನು ಹುಡುಕಿ ಹಳ್ಳಿಗರು ಮನೆಗೆ ಕೊಂಡೊಯ್ಯುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ, ಮಾರ್ಕೆಟ್‌ನಿಂದ ತಂದ ಚೆಂಡು ಹೂವುಗಳಿಂದ ಆರತಿಯ ಶೃಂಗಾರ ಮಾಡುವ ಪರಿಪಾಟ ಹೆಚ್ಚುತ್ತಿದೆ. ಹಾಗಾಗಿ ನಾಟಿಯ ಜೊತೆ ಹೈಬ್ರಿಡ್ ಚೆಂಡು ಹೂವು ಕಲಬೆರಕೆಯಾಗುತ್ತಿದೆ.

ಇಡೀ ದಿನ ಆರತಿ ಹೊತ್ತ ಗುಂಪುಗಳು ಬರುತ್ತಲೇ ಇದ್ದವು. ಅಪ್ಪಟ ನಾಟಿ ಚೆಂಡು ಹೂವು ಹುಡುಕಿ ಹುಡುಕಿ ನನಗೂ ಬೇಸರ ಬಂದಿತ್ತು. ತಾವು ಬೆಳೆದಿದ್ದು ನಾಟಿಯೋ, ಅಂಗಡಿಯಿಂದ ತಂದ ಚೆಂಡು ಹೂವಿನ ತಳಿಯೋ ಎಂದು ಖಚಿತಪಡಿಸಲಾಗದಷ್ಟು ಆರತಿಗಳೇ ಸಿಗುತ್ತಿದ್ದವು.

ಇಳಿಸಂಜೆಯ ಹಾಗೆ, ಅಜ್ಜಿಯೊಂದು ಮೊಮ್ಮಗನ ತಲೆಯ ಮೇಲೆ ಆರತಿ ಹೊರಿಸಿಕೊಂಡು ಬಂತು. ಬಣ್ಣ ಬಣ್ಣದ ಚೆಂಡು ಹೂವಿನ ಆರತಿಯ ನಡುವೆ ಚಿಂತಾಮಣಿ ಹೂವು ಕೂಡ ಇಣುಕುತ್ತಿತ್ತು. 'ಇದು ನಮ್ಮ ಮನೇಲಿ ಬೆಳೆದಿರೋದೆ. ನಾವು ಅಂಗಡಿ ಬೀಜ ತರಲ್ಲ' ಎಂದ ಮಣೂರಿನ ಕದಿರಮ್ಮ ತಮ್ಮ ಆರತಿಯಿಂದ ತೆಗೆದ ಚೆಂಡು ಹೂವುಗಳನ್ನು ನನ್ನ ಕೈಗಿತ್ತರು.

ನನಗೆ ನಿಧಿ ಸಿಕ್ಕಷ್ಟು ಸಂತೋಷವಾಯಿತು. ಕದಿರಮ್ಮ ಕೊಟ್ಟ ಚೆಂಡು ಹೂವಿನ ಗಿಡ ಬೆಳೆಸಿ, ತೋಟಕ್ಕೆ ಬಣ್ಣ ಹಚ್ಚುವ ಕನಸು ಗರಿಗೆದರಿತು.

ಪ್ರತಿಕ್ರಿಯಿಸಿ: feedback@sudha.co.in